1. ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ. ಎಸ್. ಈಶ್ವರಪ್ಪ (ಇಂಧನ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ದಿನಾಂಕ 21-7-08 ರಂದು 1ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 12 ಪ್ರಶ್ನೆಗಳ ಪೈಕಿ 07 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಈಗ ಮುಂದಿನ ವಿಷಯಕ್ಕೆ ಹೋಗುವುದಕ್ಕಿಂತ ಮೊದಲು ನಾನು ಹೇಳುವುದೇನೆಂದರೆ, ಇವತ್ತು ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಹುಟ್ಟುಹಬ್ಬ. ಈ ಸದನದ ಮುಖಾಂತರ ಎಲ್ಲರ ಪರವಾಗಿ ನಾನು ಅವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಅರ್ಪಿಸುತ್ತೇನೆ.

ಈಗ ಗಮನ ಸೆಳೆಯುವ ಸೂಚನೆಗಳು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : ರಾಜ್ಯಕ್ಕೆ ಹೊರಗಡೆಯಿಂದ 1000 MW ವಿದ್ಯುತ್ತನ್ನು ಖರೀದಿ ಮಾಡುವ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆಗಿಂತ ಮೊದಲು ಇಂಧನ ಸಚಿವರಾದ ಮಾನ್ಯ ಈಶ್ವರಪ್ಪನವರು ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಒಂದು ಹೇಳಿಕೆ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ unscheduled load shedding ಏನಾಗುತ್ತಿದೆ, ಇದನ್ನು ಸರಿಪಡಿಸಬೇಕಾದರೆ ಹೊರಗಡೆಯಿಂದ 1000 MW electricity ಅನ್ನು ಖರೀದಿ ಮಾಡುತ್ತೇವೆ ಮತ್ತು electricity ಯನ್ನು ಅತ್ಯಂತ ಕಡಿಮೆ ರೇಟ್‌ನಲ್ಲಿ ಮಾನ್ಯ ರಮಣ್‌ಸಿಂಗ್‌ರವರು ಕೊಡುತ್ತೇವೆಂದು ಹೇಳಿದ್ದಾರೆ ಎನ್ನುವುದನ್ನು ಪತ್ರಿಕೆಯಲ್ಲಿ ಬಂದಿರುವುದನ್ನು ನಾವು ಓದಿದ್ದೇವೆ. ಎರಡನೆಯದಾಗಿ, 1000 MW ವಿದ್ಯುತ್ ಉತ್ಪಾದನೆ ಘಟಕವನ್ನು ಕೂಡ ಅಲ್ಲಿಯೇ ಸ್ಥಾಪನೆ ಮಾಡುವುದಕ್ಕೆ ಅವರು ಒಪ್ಪಿದ್ದಾರೆ, ಅದೂ ಕೂಡ ನಮ್ಮ ಪರಿಶೀಲನೆಯಲ್ಲಿದೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಈಗ ಸದನ ನಡೆಯುತ್ತಿದೆ, ಸದನ ನಡೆಯುತ್ತಿರುವಾಗ ಇಂತಹ ಮಹತ್ವವಾದಂತಹ ಹೇಳಿಕೆಗಳನ್ನು ಸದನದ ಹೊರಗಡೆ ನೀಡುವುದು ಸಮಂಜಸವಲ್ಲ. ಇವತ್ತು 1,000 MW ಅಂದರೆ, ಇವತ್ತಿನ ಕಾಲದಲ್ಲಿ ಕನಿಷ್ಟಪಕ್ಷ ಒಂದು ಮೆಗಾವ್ಯಾಟ್ ಉತ್ಪಾದನೆಗೆ 4 ರಿಂದ 5 ಕೋಟಿ ರೂಪಾಯಿ ಆಗಬಹುದು. ಹಾಗಿದ್ದಾಗ 5,000 ಕೋಟಿ ರೂಪಾಯಿಯ ಬಜೆಟ್‌ನ್ನು ಹೊರಗಡೆ announce ಮಾಡಿ, ಅದರ ವಿಚಾರವಾಗಿ ನಾವು ನೋಡಿದ್ದೇವೆ, ಹೇಳಿದ್ದೇವೆಂದು ಅವರಿಗೆ ಮಾಹಿತಿ ಕೊಡುವುದಕ್ಕಿಂತಲೂ, ಸದನ ಇಲ್ಲಿ ನಡೆದಿದೆ, ನಡೆದಾಗ ಯಾವ ದಿಕ್ಕಿನಲ್ಲಿ ಮಾತು ಆಯಿತು? ಏನು ಕೊಡುತ್ತೇವೆಂದು ಹೇಳಿದರು? ನಿಜವಾಗಿಯೂ ನಿಮ್ಮ ಘಟಕವನ್ನು ಅಲ್ಲಿ ಸ್ಥಾಪನೆ ಮಾಡುತ್ತಿದ್ದೀರಾ? ವಿದ್ಯುತ್ ಖರೀದಿ ಮಾಡುತ್ತಿದ್ದೀರಾ? ಹಾಗೆ ಖರೀದಿ ಮಾಡಿದರೆ, ಅದರ ಬೆಲೆ ಈಗಿರುವಂತಹ price ಗಿಂತಲೂ ಕಡಿಮೆ ಇದೆಯಾ? ಎಲ್ಲಾ ವಿಚಾರವನ್ನು ಕೂಡ ನೀವು ಹೇಳಬೇಕಾಗಿದ್ದರೆ ಸದನವನ್ನು ವಿಶ್ವಾಸಕ್ಕೆ